

## ನಕ್ಕುಬಿಡಿ

ಮನೆಗೆ ಬಂದಿದ್ದ ನೆಂಟರಲ್ಲೊಬ್ಬರು ಉಪಾಹಾರ ಸೇವಿಸಿದ ನಂತರ, 'ಸರಿ ನಾವಿನ್ನು ಹೋಗಿ ಬರ್ತೇವೆ' ಎಂದರು. ಕೂಡಲೆ ಅಡುಗೆ ಮನೆಯಿಂದ ಹೊರಬಂದ ನಂಜನ ಹೆಂಡತಿ 'ಒಲೆ ಮ್ಯಾಲೆ ಕಾಕಿ ಇಟ್ಟಿದ್ದೀನಿ' ಎಂದಳು. ನೆಂಟರು ಆಶ್ಚರ್ಯದಿಂದ ಪರಸ್ಪರ ಮುಖ ನೋಡಿಕೊಂಡರು. ಸನ್ನಿವೇಶವನ್ನು ಅರ್ಥ ಮಾಡಿಕೊಂಡ ನಂಜ, 'ಅವಳು 'ಕ'ನ ಪ ಅಂತ, 'ಕಿ'ನ ಪಿ ಅಂತ ಹೇಳ್ತಿದ್ದಾಳೆ ಅಷ್ಟೇ. ತಪ್ಪು ತಿಳಿಯಬೇಡಿ ಅಂದ.




***

ಮೇಷ್ಟು: ತಾಯಿಯ ಮಹತ್ವದ ಬಗ್ಗೆ ಬರೆಯಿರಿ.
ವಿದ್ಯಾರ್ಥಿ: ಜೀವನದಲ್ಲಿ ತಾಯಿಯ ಸ್ಥಾನ ದೊಡ್ಡದು. ತಂದೆಯ ಸ್ಥಾನ ಅದಕ್ಕಿಂತಲೂ ದೊಡ್ಡದು. ಯಾಕೆಂದರೆ ನಮ್ಮ ತಾಯಿಗಿಂತ ನಮ್ಮ ತಂದೆ ನಾಲ್ಕು ವರ್ಷ ದೊಡ್ಡವರು.

***

ಆತ್ಮಹತ್ಯೆಗೆ ನಿಖರ ಕಾರಣ ಏನೆಂದು ನ್ಯಾಯಾಲಯ ಕೇಳಿತ್ತು. ಅದಕ್ಕೆ ಪ್ರಕರಣದ ತನಿಖಾಧಿಕಾರಿ ಕೊಟ್ಟ ಸಿಂಗಲ್ ಲೈನ್ ವರದಿ. 'ಈ ವ್ಯಕ್ತಿಯ ಆತ್ಮಹತ್ಯೆಗೆ ಹಲವು ಕಾರಣ'

***

ನಂಜ: ಮಂಜ ಈ ಸರ್ಕಾರದೋರು ಮಹಿಳೆಯರಿಗೆ ಉಚಿತ ಪ್ರಯಾಣ ಯಾಕ್ ಮಾಡವ್ರೆ?
ಮಂಜ: ಯಾಕಂದ್ರೆ ಅವರ್ ಹಿಂದೆ ಪುರುಷರು ಇದ್ದೇ ಇರ್ತಾರೆ ಅಂತ.

***

ಗಂಡ: ರೊಟ್ಟಿಯನ್ನ ಒಳ್ಳೆ ಬೆರಣಿ ತಟ್ಟಂಗೆ ತಟ್ಟಿದ್ದೀಯಲ್ಲೇ...
ಹೆಂಡತಿ: ನೀವೆ ಹೇಳಿದ್ರಲ್ಲಾ, ಏನೇ ಮಾಡಿದ್ರು ದೊಡ್ಡಾಗೆ ಮಾಡ್ಬೇಕು ಅಂತ.

***

ಗುಂಡ: ಕೋದಂಡ, ಲವ್ ಮಾಡಿ ಮದುವೆ ಆದರೂ ಹೆಂಡ್ತೀನ ಯಾಕೆ ಬಿಟ್ಟೆ?
ಕೋದಂಡ: ನಾನು ಅವಳಿಗೆ ಹಂಡ್ರೆಡ್ ಪರ್ಸೆಂಟ್ ಫ್ರೀಡಂ ಕೊಟ್ಟಿದ್ದೀನಿ.

***

ಗುಂಡ: ಕೋದಂಡ, ಸಿನಿಮಾಗಳಲ್ಲಿ ಹೀರೊ, ವಿಲನ್ ಪರಸ್ಪರ ಯಾಕೆ ಬಡಿದಾಡ್ತಾರೆ?
ಕೋದಂಡ: ಆ ದಿನದ ಪೇಮೆಂಟ್‌ಗೆ.

ಸಂಗ್ರಹ: **ಮಲ್ಲಿಕಾರ್ಜುನ ಸುರಧೇನುಪುರ**

ಸ್ಟೀಲ್ ಪಾತ್ರೆಯ ಅಂಗಡಿಯಲ್ಲಿ ಗಂಡ ಹೆಂಡತಿಯ ಜಗಳ ಸಾಗಿತ್ತು. ಚಿಕ್ಕ ಲೋಟ ಕೊಡಿ ಎಂದು ಹೆಂಡತಿ ಹೇಳುತ್ತಿದ್ದರೆ, ದೊಡ್ಡ ಲೋಟ ಕೊಡಿ ಎಂದು ಗಂಡ ಹೇಳುತ್ತಿದ್ದ. ನಿಮ್ಮ ಶ್ರೀಮತಿಯವರು ಚಿಕ್ಕ ಲೋಟ ಸಾಕು ಎಂದು ಹೇಳುತ್ತಿದ್ದರೆ ನೀವೇಕೆ ದೊಡ್ಡ ಲೋಟ ಕೊಡಿ ಎಂದು ಹೇಳುತ್ತಿದ್ದೀರಿ ಎಂದು ಅಂಗಡಿಯವ ಕೇಳಿದ. ಚಿಕ್ಕ ಲೋಟದಲ್ಲಿ ತೊಳೆಯುವಾಗ ನನ್ನ ಕೈ ಹೋಗುವುದಿಲ್ಲ, ಅದಕ್ಕೆ ದೊಡ್ಡ ಲೋಟ ಕೊಡಿ ಎಂದು ಕೇಳುತ್ತಿದ್ದೇನೆ. ನನ್ನ ಕಷ್ಟ ಅವಳಿಗೇನು ಗೊತ್ತು ಎಂದ ಗಂಡ.

***

ಮಿಸ್: ನೀವು ಚೆನ್ನಾಗಿ ಓದಿ, ನಮ್ಮ ದೇಶವನ್ನು ಮುಂದಕ್ಕೆ ಒಯ್ಯಬೇಕು ಮಕ್ಕಳೆ.
ಗುಂಡ: ಸಾಧ್ಯವಿಲ್ಲ ಮಿಸ್! ನಮ್ಮ ದೇಶವನ್ನು ಮುಂದಕ್ಕೆ ಒಯ್ಯಲು ಹಿಮಾಲಯ ಪರ್ವತ ಅಡ್ಡ ಇದೆ.

***

ಮೇಷ್ಟು: ಜಗತ್ತಿನ ಅತ್ಯಂತ ಹಳೆಯ ಪ್ರಾಣಿ ಯಾವುದು?
ಗುಂಡ: ಜೀಬ್ರಾ ಸರ್!
ಮೇಷ್ಟು: ಜೀಬ್ರಾ ನಾ, ಅದು ಹೇಗೆ?
ಗುಂಡ: ಏಕೆಂದರೆ ಅದು ಇನ್ನೂ ಕಪ್ಪು ಬಿಳುಪಿನಲ್ಲಿರುವುದರಿಂದ.

***

ಮಿಸ್: ಮೋಡಗಳು ಕಪ್ಪಾಗಿರುತ್ತವೆ ಏಕೆ?
ಬಂಟಿ: ಸದಾ ಬಿಸಿಲಿನಲ್ಲಿ ತಿರುಗಾಡುತ್ತಿರುತ್ತವಲ್ಲ ಮಿಸ್! ಅದಕ್ಕೆ ಕಪ್ಪಾಗಿವೆ.

ತಿಮ್ಮ: ಏನಯ್ಯಾ, ವಿಸ್ಕಿನ ಸ್ವಾದಿಂದ ಕುಡಿತಾ ಇದ್ದಿಯಾ?
ಗುಂಡ: ಹೌದು ಕಣೋ. ವಿಸ್ಕಿನ ಕೈಯಿಂದ ಮುಟ್ಟೋದಿಲ್ಲ ಅಂತ ನನ್ನ ಹೆಂಡತಿಗೆ ಮಾತು ಕೊಟ್ಟಿದ್ದೇನೆ.

ಸಂಗ್ರಹ: **ಶರದ ಕುಲರ್ಣಿ, ಬೀದರ್**

